# ಹಾವಿನ ಸಂಬಂಧಿಯಲ್ಲ, ಆದರೂ ಹಾವು ರಾಣಿ!



ಚಿತ್ರ– ಲೇಖನ: **ಶಶಿಧರಸ್ವಾಮಿ ಆರ್. ಹಿರೇಮಠ**

ನಾಗರ ಹಾವನ್ನು ಹಾವು ಸಂತತಿಯ ರಾಜ ಎನ್ನುತ್ತಾರೆ. ಆದರೆ ಹಾವು ರಾಣಿ ಎಂದು ಕರೆಯುವುದು ಹಲ್ಲಿಯ ಪ್ರಬೇಧವೊಂದನ್ನು! ಹಾವುರಾಣಿ ಎಂದು ಕರೆವ ಇದು ಎಲ್ಲಿಯೂ ಕೂಡ ಹಾವಿನೊಂದಿಗಿದ್ದು ಬದುಕಿದ, ಮಿಲನ ಕೂಟದಲ್ಲಿ ತೊಡಗಿದ ಉದಾಹರಣೆಗಳಿಲ್ಲ. ನೆಲದ ಮೇಲೆ, ಕಲ್ಲಿನ ಸಂದುಗಳಲ್ಲಿ ಕಂಡು ಬರುವ ಇವು ನಿಸರ್ಗದ ಸಮತೋಲನ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಹಾವುರಾಣಿಗಳ ಮೈ ಬಣ್ಣ ಹೊಳಪು ಕಂದು, ನೀಳವಾದ ಚಪ್ಪಟೆ ದೇಹ, ಬೆನ್ನು ಕಂಚು ವರ್ಣ, ಅಲ್ಲಲ್ಲಿ ಚುಕ್ಕೆಗಳಿವೆ. ಕಣ್ಣಿನಿಂದ ಬಾಲದವರೆಗೆ ಒಂದು ಪಟ್ಟಿ ಇದೆ. ದೇಹದ ಮೇಲೆ ಒಂದೇ ರೀತಿಯ, ಒಂದೇ ಗಾತ್ರದ ಹುರುಪೆಗಳಿವೆ. ಹುರುಪೆಗಳಿಂದ ಆವೃತವಾದ ಕೆಳ ಕಣ್ಣು ರೆಪ್ಪೆ ಇದೆ. ನಾಲ್ಕು ಕಾಲುಗಳಿದ್ದು ಪ್ರತಿಯೊಂದು ಕಾಲುಗಳು ಐದು ಬೆರಳುಗಳನ್ನು ಹೊಂದಿವೆ. ಕುತ್ತಿಗೆಯು ಅತೀ ಸಣ್ಣದು, ಮೂತಿ ಉದ್ದವಾಗಿದೆ. ವೃತ್ತಾಕಾರದ ಕಿವಿಗಳು, ಕೆಂಪಾದ ಕಣ್ಣುಗಳಿವೆ. ಉದ್ದವಾದ ಹಾಗೂ ಚಪ್ಪಟೆಯಾದ ಬಾಲವು ತುದಿಯಲ್ಲಿ ಕ್ಷಿಣಿಸಿ ಮೊನಚಾಗಿದೆ. ಶತ್ರು ಪ್ರಾಣಿ ಅಟ್ಟಿಸಿಕೊಂಡು ಬಂದು ಹಿಡಿದಾಗ ಬಾಲವು ತುಂಡಾಗಿ ಬಿದ್ದು ವಿಲಿವಿಲಿ ಒದ್ದಾಡುತ್ತಿದ್ದರೆ ಈ ಹಾವುರಾಣಿ ತಪ್ಪಿಸಿಕೊಂಡು ಬಚಾವಾಗುತ್ತದೆ. ತುಂಡಾದ ಬಾಲವು ಕಾಲಾನಂತರ ಮತ್ತೆ ದೇಹದಿಂದಲೇ ಬೆಳವಣಿಗೆ ಹೊಂದುತ್ತದೆ.

ಸಾಮಾನ್ಯವಾಗಿ ಕೀಟಾಹಾರಿ. ಹಗಲಿನಲ್ಲಿ ಆಹಾರ ಅನ್ವೇಷಣೆಯಿಂದ ಮನೆಯೊಳಕ್ಕೆ ಬರುವುದೂ ಇದೆ.

ಸ್ವಭಾವತಃ ನೆಲವನ್ನು ಕೆದರುವುದು ಹಾಗೂ ಅಗೆಯುವುದನ್ನು ಇಷ್ಟ ಪಡುವ ಇವು ಬಹುತೇಕ ಸಮಯವನ್ನು ನೆಲದಡಿ ಕಳೆಯುತ್ತವೆ. ಶತ್ರುಗಳಿಂದ ರಕ್ಷಣೆಗೆ ಕೆಲವೊಮ್ಮೆ ಸುರಂಗ ಮಾರ್ಗವನ್ನು ರಚಿಸಿಕೊಂಡಿರುತ್ತವೆ. ಬೇಟೆ ಇರುವಿಕೆಯನ್ನು ನಾಲಿಗೆಯ ಮುಖಾಂತರ ಪತ್ತೆ ಮಾಡಿ ಬೇಟೆಯನ್ನು ಅಟ್ಟಿಸಿಕೊಂಡು ಹೋಗಿ ಹಿಡಿದು ಸ್ವಾಹಾ ಮಾಡುತ್ತವೆ. ತೆರೆದ ಜಾಗೆಯ ಕಲ್ಲುಗಳ ಮೇಲೆ ಕುಳಿತು ಬಿಸಿಲು ಕಾಯಿಸುತ್ತವೆ.

ಇವುಗಳ ಸಂತಾನಾಭಿವೃದ್ಧಿ ಅಕ್ಟೋಬರ್–ಡಿಸೆಂಬರ್ ತಿಂಗಳಲ್ಲಿ. ಇವು ಅಂಡೋತ್ಪಾದಕಗಳು. ಹೆಣ್ಣು ಹಾವುರಾಣಿಯಲ್ಲಿ ಪುರುಷಾಣುಗಳನ್ನು ಸಂಗ್ರಹಿಸಿಟ್ಟುಕೊಳ್ಳುವ ಅನುಕೂಲವಿದೆ. ಹಾಗಾಗಿ ಒಂದು ವರ್ಷದಲ್ಲಿ ಒಂದೇ ಬಾರಿ ಒಮ್ಮೆಗೆ 2 ರಿಂದ 20ರ ತಂಡದಲ್ಲಿ ತಾವು ರಚಿಸುವ ರಂಧ್ರದ ಬಿಲದಲ್ಲಿ ಅಥವಾ ನೈಸರ್ಗಿಕವಾಗಿ ರಂಧ್ರದ ಬಿಲವಿರುವಲ್ಲಿ ಮೊಟ್ಟೆಗಳನ್ನಿಡುತ್ತವೆ. ಗೂಡಿರುವ ಪ್ರದೇಶದಲ್ಲಿ ತಾಯಿ ಕಾವಲಿರುತ್ತದೆ.

### ಅಪಾಯದಂಚಿನಲ್ಲಿ

ಹಾವುರಾಣಿಗಳನ್ನು ಆಂಗ್ಲಭಾಷೆಯಲ್ಲಿ 'ಸ್ಕಿಂಕ್' ಎಂದು ಕರೆದು ಸರೀಸೃಪ ವರ್ಗದ ಹುರುಪೆ ಸರೀಸೃಪಗಳ ಸ್ಕ್ವಾಮಾಟಾ ಗಣದ ಸಿನ್ಸಿಡೇ ಕುಟುಂಬಕ್ಕೆ ಸೇರಿಸಲಾಗಿದೆ. ಭಾರತದಲ್ಲಿ ಯುಟ್ರೋಪಿಸ್ ಕ್ಯಾರಿನಾಟಾ, ಯುಟ್ರೋಪಿಸ್ ಮೆಕುಲಾರಿಯಾ, ಯುಟ್ರೋಪಿಸ್ ಕ್ವಾಡ್ರಿಕ್ಯಾರಿನಾಟಾ, ಯುಟ್ರೋಪಿಸ್ ಬೆಡ್ಡೊಮಿ, ಯುಟ್ರೋಪಿಸ್ ಟ್ರಿವಿಟ್ಟಾಟ ಮತ್ತು ಯುಟ್ರೋಪಿಸ್ ಬೈಬ್ರೋನಿ ಎಂಬ ಆರು ಪ್ರಭೇದಗಳಿವೆ. ಇದರಲ್ಲಿ ಯೂ ಟ್ರಿವಿಟ್ಟಾಟ ಮತ್ತು ಯೂ ಬೈಬ್ರೋನಿ ಪ್ರಭೇದಗಳು ವಿನಾಶದಂಚಿನಲ್ಲಿವೆ. 'ಇದು ವಿಷಕಾರಿ, ಆದರೆ ಮಾನವರಿಗೆ ಕಚ್ಚುವುದಿಲ್ಲ' ಎಂಬ ಜನಪದ ನಂಬಿಕೆ ಇದೆ. ಆದರೆ ವೈಜ್ಞಾನಿಕವಾಗಿ ಇವು ವಿಷಕಾರಿಗಳಲ್ಲ. ವಿವಿಧ ಕೀಟಗಳನ್ನು ಭಕ್ಷಿಸಿ ರೈತಮಿತ್ರರೂ ಆಗಿವೆ.